ಮಧ್ಯಂತರ ಅರ್ಜಿ ಸಂಖ್ಯೆ–1ರ ಮೇಲೆ ಆದೇಶ

ಅರ್ಜಿದಾರ/ ವಾದಿಯರು ಈ ಮಧ್ಯಂತರ ಅರ್ಜಿ ಸಂಖ್ಯೆ–1 ನ್ನು ಸಿ. ಪ್ರ. ಸಂ. ಆದೇಶ 39 ನಿಯಮ 1 ಮತ್ತು 2 ಹಾಗೂ ಸಹವಾಚಕ ಕಲಂ 151ರ ಅಡಿಯಲ್ಲಿ ಸಲ್ಲಿಸಿ, ದಾವಾ ಐಟಂ ನಂ.2 ನ್ನು ದಾವೆ ಅಂತಿಮವಾಗಿ ಇತ್ಯರ್ಥಗೊಳ್ಳುವವರೆಗೆ ಮಾರಾಟ ಮಾಡದಂತೆ ಪ್ರತಿವಾದಿಯರ ವಿರುದ್ಧ ತಾತ್ಕಾಲಿಕ ನಿರ್ಭಂದಕಾಜ್ಞೆ ನೀಡಬೇಕೆಂದು ಕೋರಿರುತ್ತಾರೆ.

2. ಅರ್ಜಿದಾರರು/ವಾದಿ ಈ ಮಧ್ಯಂತರ ಅರ್ಜಿಯನ್ನು ತನ್ನ ಪ್ರಮಾಣಪತ್ರದೊಂದಿಗೆ ಸಲ್ಲಿಸಿ ಅದರಲ್ಲಿ ವಿವರವಾದ ಕಾರಣವನ್ನು ಹೇಳಿ ಸದರಿ ಕಾರಣಗಳ ಮೇಲೆ ಈ ಮಧ್ಯಂತರ ಅರ್ಜಿಯನ್ನು ಪುರಸ್ಕರಿಸಬೇಕು ಎಂದು ಪ್ರಾರ್ಥಿಸಿಕೊಂಡಿರುತ್ತಾರೆ.

3. ಎದುರುದಾರರು/ಪ್ರತಿವಾದಿಯರು ಮಧ್ಯಂತರ ಅರ್ಜಿ ನಂ.1 ಕ್ಕೆ ತಕರಾರುಗಳನ್ನು ಸಲ್ಲಿಸಿದ್ದಾರೆ.

4. ಉಭಯಪಕ್ಷಗಾರರ ಪರ ವಕೀಲರ ವಾದ ವಿವಾದವನ್ನು ಆಲಿಸಲಾಯಿತು.

5. ನನ್ನ ಪರಿಗಣನೆಗೆ ಈ ಕೆಳಕಂಡ ಅಂಶಗಳು ಉದ್ಭವಿಸಿರುತ್ತವೆಃ–

ಅಂಶ–1 ಅರ್ಜಿದಾರ ಈ ಮಧ್ಯಂತರ ಅರ್ಜಿಯಲ್ಲಿ ಕೋರಿರುವಂತೆ

ತಾತ್ಕಾಲಿಕ ನಿರ್ಭಂದಕಾಜ್ಞೆ ಪರಿಹಾರವನ್ನು ಪಡೆಯಲು ಮೇಲ್ನೋಟದ ಕೇಸು ಇರುವುದನ್ನು ತೋರಿಸಿದ್ದಾರೆಯೇ?

ಅಂಶ–2 ಅನುಕೂಲತೆಯ ಒಲವು ಯಾರ ಪರ ಇದೆ?

ಅಂಶ–3 ಅರ್ಜಿದಾರರು ಈ ಮಧ್ಯಂತರ ಅರ್ಜಿಯಲ್ಲಿ ಕೋರಿರುವಂತೆ ತಾತ್ಕಾಲಿಕ ನಿರ್ಭಂದಕಾಜ್ಞೆ ನೀಡದೆ ಇದ್ದರೆ ಅವರಿಗೆ ಹಣದ ರೂಪದಲ್ಲಿ ತುಂಬಲಾರದಂತಹ ನಷ್ಟ ಉಂಟಾಗುತ್ತದೆಯೇ?

ಅಂಶ– 4 ಯಾವ ಆದೇಶ?

6. ಮೇಲಿನ ಅಂಶಗಳಿಗೆ ಈ ಕೆಳಕಂಡ ಕಾರಣಗಳಿಗಾಗಿ ಈ ಕೆಳಕಂಡಂತೆ ಉತ್ತರಿಸುತ್ತಿದ್ದೇನೆಃ–

ಅಂಶ–1 – ಸಕಾರಾತ್ಮಕ

ಅಂಶ–2 – ಸಕಾರಾತ್ಮಕ

ಅಂಶ–3 – ಸಕಾರಾತ್ಮಕ

ಅಂಶ–4 – ಅಂತಿಮ ಆದೇಶದಂತೆಃ

## ಕಾರಣಗಳು

7. ಅಂಶ–1 – ಅರ್ಜಿದಾರ/ವಾದಿಯರು ವಿಭಾಗ ಮತ್ತು ಪ್ರತ್ಯೇಕ ಸ್ವಾಧೀನತೆಯನ್ನು ಕೋರಿ ದಾವಾ ಆಸ್ತಿಗಳಲ್ಲಿ 1/6 ಅಂಶ ಭಾಗಾಂಶ ಮತ್ತು ಪ್ರತ್ಯೇಕ ಸ್ವಾಧೀನತೆಯನ್ನು ಕೊಡಿಸಬೇಕು 1 ನೇ ಪ್ರತಿವಾದಿ ಹಾಗೂ ಆಕೆಯ ಗಂಡ ಚನ್ನಬಸಪ್ಪ ಮತ್ತು 2 ರಿಂದ 7 ನೇ ಪ್ರತಿವಾದಿಯರು ದಿಃ09/12/2020 ರಂದು ಮಾಡಿಕೊಂಡ ಪಾಲುವಿಭಾಗವು ವಾದಿಯರಿಗೆ ಬಂಧನಕಾರಿಯಾಗಿರುವುದಿಲ್ಲ ಎಂದು ಘೋಷಣೆ ಮಾಡಿ ಪಾಲುವಿಭಾಗಪತ್ರವನ್ನು ರದ್ದುಗೊಳಿಸುವಂತೆ ಪ್ರಾರ್ಥಿಸಿದ್ದಾರೆ. ಪ್ರಸ್ತುತ ದಾವೆಯಲ್ಲಿ ಮಧ್ಯಂತರ ಅರ್ಜಿ ನಂ.1 ನ್ನು ಸಲ್ಲಿಸಿ

ಪ್ರತಿವಾದಿಯರು ದಾವಾ ಐಟಂ ನಂ.2 ನ್ನು ಈ ದಾವೆ ಇತ್ಯರ್ಥವಾಗುವವರೆಗೆ ಮಾರಾಟ, ಅಡಮಾನ ಅಥವಾ ಇತರ ಯಾವುದೇ ರೀತಿಯಲ್ಲಿ ಪರಭಾರೆ ಮಾಡದಂತೆ ತಾತ್ಕಾಲಿಕ ನಿರ್ಬಂಧಕಾಜ್ಞೆ ನೀಡಬೇಕೆಂದು ಪ್ರಾರ್ಥಿಸಿದ್ದಾರೆ.

8. ಪ್ರತಿವಾದಿಯರು ತಮ್ಮ ತಕರಾರಿನಲ್ಲಿ ದಾವಾ ಆಸ್ತಿಯು ಒಟ್ಟು ಕುಟುಂಬದ ಆಸ್ತಿಯಾಗಿರುವುದಿಲ್ಲ. ಪ್ರತಿವಾದಿಯರಿಗೆ ನೊಂದಾಯಿತ ದಸ್ತಾವೇಜಿನ ಮೂಲಕ ಮಾಲೀಕತ್ವದ ಹಕ್ಕು ಪ್ರಾಪ್ತವಾಗಿರುತ್ತದೆ. ವಾದಿ ಮತ್ತು ಪ್ರತಿವಾದಿಯರ ಮಧ್ಯದಲ್ಲಿ ಈಗಾಗಲೇ ಎರಡು ಸಾರಿ ವಿಭಾಗವಾಗಿದ್ದು, ವಾದಿಯರು ಮತ್ತು ಮೃತ ಚನ್ನಬಸಪ್ಪ ಪಾಲುವಿಭಾಗ ಮಾಡಿಕೊಂಡಿದ್ದು, ಮೃತ ಚನ್ನಬಸಪ್ಪನವರ ಜೀವಿತಾವಧಿಯಲ್ಲಿ ವಾದಿಯರು ಯಾವುದೇ ತಕರಾರನ್ನು ಮಾಡಿರುವುದಿಲ್ಲ. ದಾವಾ ಆಸ್ತಿಯಲ್ಲಿ ವಾದಿಯರು ಯಾವತ್ತೂ ಸ್ವಾಧೀನಾನುಭವದಲ್ಲಿರುವುದಿಲ್ಲ. ವಾದಿಯರು ದಾವಾ ಆಸ್ತಿಯಲ್ಲಿ ಹಿಸ್ಸೆ ಕೊಡುವಂತೆ ಯಾವತ್ತೂ ಕೇಳಿರುವುದಿಲ್ಲ. ದಾವಾ ಆಸ್ತಿಯು ಸುಮಾರು 50 ವರ್ಷಗಳಿಗಿಂತ ಮೇಲ್ಪಟ್ಟು ಪ್ರತಿವಾದಿಯರ ಸ್ವಾಧೀನಾನುಭವದಲ್ಲಿದ್ದು, ಮೃತ ಚನ್ನಬಸಪ್ಪನವರ ಜೀವಿತಾವಧಿಯಲ್ಲಿ ವಾದಿಯರು ಯಾವುದೇ ಕ್ರಮ ಜರುಗಿಸಿರುವುದಿಲ್ಲ. ದಾವಾ ಆಸ್ತಿ ಮೃತ ಚನ್ನಬಸಪ್ಪನವರ ಮಾಲೀಕತ್ವದ ಆಸ್ತಿಯಾಗಿರುವುದರಿಂದ ಸದರಿ ಆಸ್ತಿಯನ್ನು ಬಿಟ್ಟು ಉಳಿದ ಆಸ್ತಿಗಳಲ್ಲಿ ಪಾಲುವಿಭಾಗ ಮಾಡಿಕೊಂಡಿದ್ದಾರೆ. ವಾದಿಯರದು ಮೇಲ್ನೋಟಕ್ಕೆ ಸಾಬೀತುಪಡಿಸುವ ದಾವೆ ಇರುವುದಿಲ್ಲ. ಅನುಕೂಲತೆಯ ಒಲವು ವಾದಿಯರ ಪರವಾಗಿ ಇರದೇ ಪ್ರತಿವಾದಿಯರ ಪರವಾಗಿ ಇರುವುದರಿಂದ ವಾದಿಯರು ಸಲ್ಲಿಸಿದ ಮಧ್ಯಂತರ ಅರ್ಜಿ ನಂ.1 ನ್ನು ಖರ್ಚು ಸಹಿತ ವಜಾಗೊಳಿಸಬೇಕೆಂದು ಪ್ರಾರ್ಥಿಸಿದ್ದಾರೆ.

9. ವಾದಿಯರು ಮತ್ತು 1 ನೇ ಪ್ರತಿವಾದಿಯ ಗಂಡ 2 ರಿಂದ 7 ನೇ ಪ್ರತಿವಾದಿಯರ ತಂದೆ ಚನ್ನಬಸಪ್ಪ ಎನ್ನುವವರು ಗೌಡರ ಬಸಪ್ಪ ಎನ್ನುವವರ ಮಕ್ಕಳಾಗಿದ್ದು, ದಾವಾ ಆಸ್ತಿಗಳು ವಾದಿ

ಮತ್ತು ಪ್ರತಿವಾದಿಯರ ಒಟ್ಟು ಕುಟುಂಬದ ಆಸ್ತಿಗಳಾಗಿದ್ದು, ದಿಃ24/06/1973 ರಂದು ಕುಟುಂಬದ ಮೂಲ ಪುರುಷ ಮೃತರಾಗಿದ್ದು, ಕುಟುಂಬದ ಮೂಲ ಪುರುಷ ಮೃತಪಟ್ಟ ನಂತರ ಒಟ್ಟು ಕುಟುಂಬದ ಮೇಲ್ವಿಚಾರಣೆಯನ್ನು 1 ನೇ ಪ್ರತಿವಾದಿಯ ಗಂಡ ಚನ್ನಬಸಪ್ಪ ನೋಡಿಕೊಳ್ಳುತ್ತಿದ್ದು, ಸದರಿಯವರು ದಿಃ12/11/2021 ರಂದು ಮೃತಪಟ್ಟಿರುತ್ತಾರೆ. ವಾದಿಯರು ಮತ್ತು 1 ನೇ ಪ್ರತಿವಾದಿಯ ಗಂಡ ದಿಃ23/11/2016 ರಂದು ಒಟ್ಟು ಕುಟುಂಬದ ಕೆಲವು ಜಮೀನುಗಳನ್ನು ವಿಭಾಗಪತ್ರದ ಮೂಲಕ ವಿಭಾಗ ಮಾಡಿಕೊಂಡಿದ್ದು, ಸದರಿ ವಿಭಾಗಪತ್ರದ ಮೂಲಕ ಖಾತೆ ಮತ್ತು ಸ್ವಾಧೀನಾನುಭವವನ್ನು ಹೊಂದಿ ಸಾಗುವಳಿ ಮಾಡಿಕೊಂಡು ಬರುತ್ತಿದ್ದಾರೆ. ಸದರಿ ವಿಭಾಗಪತ್ರದಲ್ಲಿ ಐಟಂ ನಂ.2 ನ್ನು ಸೇರಿಸಿರುವುದಿಲ್ಲ. 1 ನೇ ಪ್ರತಿವಾದಿಯ ಗಂಡ ದಾವಾ ಐಟಂ ನಂ.2 ನ್ನು ವಿಭಾಗಪತ್ರದಲ್ಲಿ ಸೇರಿಸುವಂತೆ ಕೇಳಿದಾಗ ವಾದಿಗಳಿಗೆ ಸುಳ್ಳು ಭರವಸೆ ಮತ್ತು ಆಶ್ವಾಸನೆ ಕೊಡುತ್ತ ವಿನಾಃ ಕಾರಣ ಕಾಲಹರಣ ಮಾಡುತ್ತ ಬಂದಿದ್ದಾರೆ. ದಿಃ09/12/2020 ರಂದು ವಾದಿಯರನ್ನು ಹೊರತುಪಡಿಸಿ 1 ನೇ ಪ್ರತಿವಾದಿ ಮತ್ತು ಮಕ್ಕಳ ಮಧ್ಯದಲ್ಲಿ ನೊಂದಾಯಿತ ವಿಭಾಗಪತ್ರವಾಗಿದ್ದು, ಸದರಿ ವಿಭಾಗಪತ್ರವು ವಾದಿಯರಿಗೆ ಬಂದನಕಾರಿಯಾಗಿರುವುದಿಲ್ಲ. ಪ್ರಸ್ತುತ ದಾವೆ ಇತ್ಯರ್ಥವಾಗುವವರೆಗು ದಾವಾ ಐಟಂ ನಂ.2 ನ್ನು ಮಾರಾಟ ಮಾಡದಂತೆ ತಾತ್ಕಾಲಿಕ ನಿರ್ಬಂಧಕಾಜ್ಞೆ ಆದೇಶ ಕೋರಿದ್ದಾರೆ. ವಾದಿಯರು ತಮ್ಮ ಪ್ರಮಾಣಪತ್ರದಲ್ಲಿ ದಾವಾ ಐಟಂ ನಂ.2 ನ್ನು ಪ್ರತಿವಾದಿಯರು ಯಾರಿಗೆ ಮಾರಾಟ ಮಾಡಲು ಪ್ರಯತ್ನಿಸಿದ್ದಾರೆಂದು ನಿಖರವಾಗಿ ಹೇಳಿರುವುದಿಲ್ಲ. ದಾವಾ ಆಸ್ತಿಗಳ ಕುರಿತು ವಾದಿಯರು ವಿಭಾಗ ಮತ್ತು ಪ್ರತ್ಯೇಕ ಸ್ವಾಧೀನತೆಯನ್ನು ಕೋರಿದ್ದು, ದಾವಾ ಆಸ್ತಿಯು ಒಟ್ಟು ಕುಟುಂಬದ ಆಸ್ತಿ ಎಂದು ಸಾಬೀತುಪಡಿಸುವ ಭಾರ ವಾದಿಯರ ಮೇಲೆ ಇರುವುದರಿಂದ ಪ್ರತಿವಾದಿಯರು ದಾವಾ ಐಟಂ ನಂ.2 ನ್ನು ಮಾರಾಟ ಮಾಡಿದಲ್ಲಿ ವ್ಯಾಜ್ಯಗಳು ದ್ವಿಗುಣಿಕರಣವಾಗುವ ಸಂಭವ ಇರುವುದರಿಂದ ಪ್ರಸ್ತುತ ದಾವೆ ಇತ್ಯರ್ಥವಾಗುವವರೆಗೆ ದಾವಾ

ಐಟಂ ನಂ.2 ನ್ನು ಪ್ರತಿವಾದಿಯರು ಮಾರಾಟ, ಅಡಮಾನ ಅಥವಾ ಇತರೆ ಯಾವುದೇ ರೀತಿಯಲ್ಲಿ ಪರಭಾರೆ ಮಾಡದಂತೆ ಆದೇಶಿಸದೇ ಇದ್ದಲ್ಲಿ ಪ್ರತಿವಾದಿಯರಿಗಿಂತ ವಾದಿಯರಿಗೆ ತೊಂದರೆಯಾಗುವ ಸಾಧ್ಯತೆ ಇರುತ್ತದೆ. ವಾದಿಯರು ಈ ಮಧ್ಯಂತರ ಅರ್ಜಿಯಲ್ಲಿ ಕೋರಿರುವಂತೆ ತಾತ್ಕಾಲಿಕ ನಿರ್ಭಂದಕಾಜ್ಞೆ ಪರಿಹಾರವನ್ನು ಪಡೆಯಲು ಮೋಲ್ನೋಟದ ಕೇಸು ಇರುವುದನ್ನು ತೋರಿಸಿರುವುದರಿಂದ ಅಂಶ-1 ನ್ನು ಸಕಾರಾತ್ಮಕವಾಗಿ ಉತ್ತರಿಸಿದ್ದೇನೆ.

10. <u>ಅಂಶ-2 ಮತ್ತು 3</u> - ವಾದಿಯರು ಮೇಲ್ನೋಟದ ಕೇಸು ಇರುವುದನ್ನು ತೋರಿಸಿದ್ದರೂ ಸಹ ಅನುಕೂಲತೆಯ ಒಲವು ತನ್ನ ಪರ ಇದೆ ಎಂದು ಮತ್ತು ಒಂದು ವೇಳೆ ತಾತ್ಕಾಲಿಕ ನಿರ್ಭಂದಕಾಜ್ಞೆ ನೀಡದೇ ಇದ್ದರೆ ತನಗೆ ಹಣದ ರೂಪದಲ್ಲಿ ತುಂಬಲಾರದಂತಹ ನಷ್ಟ ಉಂಟಾಗುತ್ತದೆ ಎನ್ನುವುದನ್ನು ತೋರಿಸಲೇ ಬೇಕು. ವಾದಿಯರು ಈ ಮಧ್ಯಂತರ ಅರ್ಜಿಯಲ್ಲಿ ಕೋರಿರುವಂತೆ ಒಂದು ವೇಳೆ ತಾತ್ಕಾಲಿಕ ನಿರ್ಭಂದಕಾಜ್ಞೆಯನ್ನು ನೀಡದೇ ಇದ್ದರೆ ದಾವಾ ಐಟಂ ನಂ.2 ನ್ನು ಪ್ರತಿವಾದಿಯರು ಒಂದು ವೇಳೆ ಮಾರಾಟ ಮಾಡಿದರೆ ವಾದಿಯರು ದಾವಾ ಐಟಂ ನಂ.2 ನ್ನು ಪ್ರತಿವಾದಿಗಳೊಂದಿಗೆ ಅನುಭವಿಸುವುದರಿಂದ ವಂಚಿತರಾಗುತ್ತಾರೆ ಅದರಿಂದ ವಾದಿಯರಿಗೆ ಹಣದ ರೂಪದಲ್ಲಿ ತುಂಬಲಾರದಂತಹ ನಷ್ಟ ಉಂಟಾಗುತ್ತದೆ ಆದರೆ ಒಂದು ವೇಳೆ ವಾದಿಯರು ಈ ಮಧ್ಯಂತರ ಅರ್ಜಿಯಲ್ಲಿ ಕೋರಿರುವಂತೆ ದಾವೆ ಅಂತಿಮವಾಗಿ ಇತ್ಯರ್ಥಗೊಳ್ಳುವವರೆಗೆ ದಾವಾ ಐಟಂ ನಂ.2 ನ್ನು ಮಾರಾಟ ಮಾಡದಂತೆ ತಾತ್ಕಾಲಿಕ ನಿರ್ಭಂದಕಾಜ್ಞೆಯನ್ನು ನೀಡಿದರೆ ಅದರಿಂದ ಪ್ರತಿವಾದಿಯರಿಗೆ ಯಾವುದೇ ರೀತಿಯ ನಷ್ಟ ಹಾಗೂ ಅನ್ಯಾಯ ಉಂಟಾಗುವುದಿಲ್ಲ ಮತ್ತು ಒಂದು ವೇಳೆ ದಾವೆ ಅಂತಿಮವಾಗಿ ಇತ್ಯರ್ಥ ಆಗುವಂತಹ ಸಮಯದಲ್ಲಿ ವಾದಿ ದಾವಾ ಐಟಂ ನಂ.2 ವಾದಪತ್ರದಲ್ಲಿ ಆರೋಪಿಸಿರುವಂತೆ ಪಿತ್ರಾರ್ಜಿತ ಜಂಟಿ ಕುಟುಂಬದ ಆಸ್ತಿ ಎನ್ನುವುದನ್ನು ಸಾಭೀತುಪಡಿಸಲು ವಿಫಲನಾದರೂ ಸಹ

ಪ್ರತಿವಾದಿಯರಿಗೆ ಯಾವುದೇ ರೀತಿಯ ನಷ್ಟ ಹಾಗೂ ಅನ್ಯಾಯ ಉಂಟಾಗುವುದಿಲ್ಲ ಆದ್ದರಿಂದ ಅನುಕೂಲತೆಯ ಒಲವು ವಾದಿಯರ ಪರ ಇರುತ್ತದೆ ಹಾಗೂ ಒಂದು ವೇಳೆ ತಾತ್ಕಾಲಿಕ ನಿರ್ಭಂದಕಾಜ್ಞೆ ನೀಡದೇ ಇದ್ದರೆ ವಾದಿಯರಿಗೆ ಹಣದ ರೂಪದಲ್ಲಿ ತುಂಬಲಾರದಂತಹ ನಷ್ಟ ಉಂಟಾಗುತ್ತದೆ ಕಾರಣ ಅಂಶ–2 ಮತ್ತು 3 ನ್ನು ಸಕರಾತ್ಮಕವಾಗಿ ಉತ್ತರಿಸಿದ್ದೇನೆ.

11. ಅಂಶ–4 – ಮೇಲಿನ ಅಂಶಗಳಲ್ಲಿ ಚರ್ಚಿಸಲಾದ ಕಾರಣಗಳಿಗೆ ಈ ಕೆಳಕಂಡಂತೆ ಮಾಡಿದಃ

## ಆದೇಶ

ವಾದಿಯರು ಸಿ. ಪ್ರ. ಸಂ. ಆದೇಶ 39 ನಿಯಮ 1 ಮತ್ತು 2 ಹಾಗೂ ಸಹವಾಚಕ ಕಲಂ 151ರ ಅಡಿಯಲ್ಲಿ ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆ.1 ನ್ನು ಪುರಸ್ಕರಿಸಲಾಗಿದೆ.

ದಾವಾ ಐಟಂ ನಂ.2 ನ್ನು ದಾವೆ ಅಂತಿಮವಾಗಿ ಇತ್ಯರ್ಥಗೊಳ್ಳುವವರೆಗೆ ಮಾರಾಟ, ಅಡಮಾನ ಅಥವಾ ಇತರ ಯಾವುದೇ ರೀತಿಯಲ್ಲಿ ಪರಭಾರೆ ಮಾಡದಂತೆ ಪ್ರತಿವಾದಿಯರ ವಿರುದ್ಧ ತಾತ್ಕಾಲಿಕ ನಿರ್ಭಂದಕಾಜ್ಞೆಯನ್ನು ನೀಡಲಾಗಿದೆ.

ವಾದಿಯರು ಮತ್ತು ಪ್ರತಿವಾದಿಗಳು ಒಬ್ಬರಿಗೊಬ್ಬರು ಸಂಬಂಧಿಕರಾದ ಕಾರಣ ಖರ್ಚಿನ ಬಗ್ಗೆ ಯಾವುದೇ ಆದೇಶ ಇರುವುದಿಲ್ಲ.

Sd/-
(ಶಾರದಾದೇವಿ ಸಿ.ಹಟ್ಟಿ),
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ಹರಿಹರ.